Sri T. R. SHAMANNA.—Sir, in my constituency people have been put to lot of hardship. They are finding it very difficult to get ration cards.

Mr. DEPUTY SPEAKER.—It is in everybody's constituency and not only in yours. I would urge upon the Hon. Minister for Social Welfare and Community Development to convey the feelings of the hon. Members to the Hon. Minister concerned.

Misappropriation in supply of wood for Construction of Houses to the Poor

ಶ್ರೀ ಕೆ. ಪ್ರಭಾಕರ್.—ನಾನೂ ಸೇರಿ ನಾಲ್ಕೈದು ಜನ ರಾಜ ಹಾಕಿ ಒಂದು ಕಾರ್ ಅಟೆನ್‌ಷನ್ ನೋಟೀಸ್ ಕೊಟ್ಟು ಸಮಾರು 10 ದಿವಸವಾಗಿದೆ. ಕಳೆದ 8 ವರ್ಷದಿಂದ ಸರ್ಕಾರದವರು ಬಡವರಿಗೆ ಮನೆ ಕಟ್ಟಿಕೊಳ್ಳುವುದರ ಸಲುವಾಗಿ ಅರಣ್ಯದಿಂದ ಮರಗಳನ್ನು ಕೊಡುತ್ತಿದ್ದರು. ಅದು ದುರ್ಬಿನಿಯೋಗವಾಗುತ್ತಿದೆ ಎನ್ನುವುದರ ಬಗ್ಗೆ ಒಂದು ತನಿಖೆಗೆ ವರ್ಷಾಡು ಮಾಡಿದ್ದಾರೆ. ಅದರಿಂದ ಪ್ರಯೋಜನವಾಗುವುದಕಿಂತಲೂ ಅಪ್ರಯೋಜನ ಜಾಸ್ತಿಯಾಗಿ ಸರ್ಕಾರಕ್ಕೆ ಕೆಟ್ಟ ಹೆಸರು ಬರುವ ರೀತಿಯಲ್ಲಿ ಕಾರ್ಯಕ್ರಮ ನಡೆಯುತ್ತಿದೆ ಇದರ ಬಗ್ಗೆ ಸರ್ಕಾರದ ಉತ್ತರವೇನು ಎಂದು ಕೇಳುತ್ತೇನೆ. ಉತ್ತರ ಬೇಗ ಬರುವ ಹಾಗೆ ಮಾಡಿದರೆ ಸಾಕು.

Closure of the General Hostel at Hassan

ಶ್ರೀ ಎಂ. ಹೆಚ್. ಜಯಪ್ರಕಾಶ ನಾರಾಯಣ್.—ಸ್ವಾಮೀ, ಈಗ್ಗೆ ಎಂಟು ದಿನಗಳ ಹಿಂದೆ ಐದಾರು ಜನ ಸದಸ್ಯರು ಸೇರಿ ಒಂದು ಕಾಲಿಂಗ್ ಅಟೆನ್‌ಷನ್ ನೋಟೀಸನ್ನು ಕಳುಹಿಸಲಾಗಿತ್ತು. ಅದು ಹಾಸನದಲ್ಲಿದ್ದ ಒಂದು ಜನರರ್ ಹಾಸ್ಟರ್‌ನ್ನು ಮುಚ್ಚಿರುವುದರ ಬಗ್ಗೆ ಮತ್ತು ಅಲ್ಲಿದ್ದ ಮಕ್ಕಳ ಬಗ್ಗೆ ಇದರ ಬಗ್ಗೆ ಇಲಾಖೆಯವರು ಏನು ಮಾಡಿದ್ದಾರೆ ಎನ್ನುವುದು ತಿಳಿಯಲಿಲ್ಲ. ದಯವಿಟ್ಟು ನಾಳೆ ದಿನವಾದರೂ ಈ ಕಾರ್ ಅಟೆನ್‌ಷನ್ ನೋಟೀಸಿಗೆ ಉತ್ತರ ಸರಕಾರದಿಂದ ಬರುವ ಹಾಗೆ ಮಾಡಬೇಕೆಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

Incident in South Kanara

Sri B. SUBBAIAH SHETTY(Surathkal).—Sir, I had sent along with other hon. members a Call Attention Notice about 10 days back regarding the hooliganism by R.S.S. Workers in South Kanara District intimidating the minority and other poor tenants. There is another such incident recently in South Kanara. I request that my Call Attention may be brought before the House at the earliest.

Mr. DEPUTY SPEAKER.—I will have it examined.

Re-opening the Examination Centre at Nonavinakere

ಶ್ರೀ ಟಿ. ಎಂ. ಮಂಜುನಾಥ(ತಿಪಟೂರು).—ಸ್ವಾಮೀ, ನಾನು 20 ದಿನಗಳಿಗೆ ಮುಂಚೆಯೇ ವಿದ್ಯಾ ಮಂತ್ರಿಗಳ ಕಡೆಗೆ ನೊಣವಿನಕೆರೆ ಎಸ್. ಎಸ್. ಎಲ್. ಸಿ. ಪರೀಕ್ಷಾ ಕೇಂದ್ರವನ್ನು ಮುಚ್ಚಿರುವುದರ ಬಗ್ಗೆ ನೋಟೀಸ್ ಕಳುಹಿಸಿದ್ದರೂ ಇದುವರೆಗೂ ಸರಕಾರದಿಂದ ಈ ಸಂಬಂಧವನ್ನು ಪುನ: ತೆರೆಯುತ್ತೇವೆ ಅಥವಾ ಇಲ್ಲ ಎನ್ನುವುದಕ್ಕೆ ಉತ್ತರ ಇಲ್ಲ. ಸರಕಾರದಿಂದ ಇಂದೇ ಉತ್ತರ ಕೊಡಿಸಿ

ಕೊಡಬೇಕು. ಇಲ್ಲಿ 125 ಹೆಣ್ಣು ಮಕ್ಕಳು ಹಳ್ಳಿಗಾಡಿನಿಂದ ಬರುವವರು ಇದ್ದಾರೆ. ಇವರಿಗೆರ್ಾ ಪರೀಕ್ಷೆಗೆ ಹೋಗಲು ಕಷ್ಟವಾಗುತ್ತಿದೆ. ದಯವಿಟ್ಟು ಈ ಕೇಂದ್ರವನ್ನು ಮತ್ತೆ ಪರೀಕ್ಷಾ ಕೇಂದ್ರ ಮಾಡ ವುದರ ಬಗ್ಗೆ ಸರಕಾರ ಕೂಡಲೇ ಗಮನ ಕೊಡಬೇಕು.

ಉಪಾಧ್ಯಕ್ಷರು : ನಾನು ವಿಚಾರಮಾಡಿ ನೋಡುತ್ತೇನೆ.

ಶ್ರೀ ಕೆ. ಶ್ರೀರಾಮುಲು (ಗಾಂಧಿನಗರ).—ನಾನು 15 ದಿನಗಳಿಗೆ ಮುಂಚೆ ಹೆಡ್ ಎಂ. ಟಿ. ಕಾರ್ಮಿಕರ ಬಗ್ಗೆ ಒಂದು ಕಾಲಿಂಗ್ ಅಟೆನ್‌ಷನ್ ನೋಟೀಸು ಕಳುಹಿಸಿದ್ದೆ, ಇದರ ಬಗ್ಗೆ ಇನ್ನೂ ಉತ್ತರ ಬರದಿದ್ದರೆ ಹೇಗೆ ಸ್ವಾಮಿ ? ಇದನ್ನು ಬೇಗ ಉತ್ತರ ತರಿಸಿಕೊಡಬೇಕು. ಇದನ್ನು ಮಾರ್ಚ್ 15 ನೇ ತಾರೀಖೇ ಕಳುಹಿಸಿದ್ದೆ.

ಉಪಾಧ್ಯಕ್ಷರು.— ವಿಚಾರಮಾಡಿ ನೋಡುತ್ತೇನೆ.

Representation of the Thrown Silk Weavers

ಶ್ರೀ ಎಸ್. ಬಿ. ನಾಗರಾಳ್ (ರೇಷ್ಮೆ ಶಾಖೆಯ ರಾಜ್ಯ ಮಂತ್ರಿಗಳು).—ಸ್ವಾಮೀ, ನಾನು ನಿನ್ನೆ ದಿವಸ ಇಲ್ಲಿ ಜೀರ್ಡ್ ನಡೆಯುವಾಗ ಥ್ರೋನ್ ಸಿಲ್ಕ್ ವೀವರುಗಳು ಕಳುಹಿಸಿರುವ ಮನವಿ ಬಗ್ಗೆ ಮಾನ್ಯ ಹಿರಿಯ ಸದಸ್ಯರಾದ ಶ್ರೀ ನಾಗಣ್ಣನವರು ಹೇಳಿದಂತೆ ಅದರ ಪ್ರತಿಯನ್ನು ನಾಳೆ ಕೊಡುತ್ತೇನೆಂದು ಭರವಸೆ ಕೊಟ್ಟಿದ್ದೆ. ಅದರಂತೆ ಇಂದು ತಮ್ಮ ಮೂಲಕ ಅವರಿಗೂ ಅದರ ಒಂದು ಕಾಪಿಯನ್ನು ಕಳುಹಿಸಿಕೊಡುತ್ತೇನೆ.

ಶ್ರೀ ಕೆ. ಎಂ. ನಾಗಣ್ಣ.—ನಾನು ನಿನ್ನೆ ದಿನವೇ ಹೇಳಿದ್ದೆ ಇಂತಹ ಅರ್ಜಿಗಳು ಬೇಕಾದರೆ 19 ಅರ್ಜಿಗಳನ್ನು ನಾನೂ ಬರೆಸಿ ತರಬಹುದು ಎಂದು. ನಿನ್ನೆಯೇ ಇದನ್ನು ಹಾಜರುಮಾಡ ಬೇಕೆಂತಲೂ ತಿಳಿಸಿದ್ದೆ.

ಶ್ರೀ ಎಸ್ ಬಿ. ನಾಗರಾಳ್.—ನಾನು ಥ್ರೋನ್ ಸಿಲ್ಕ್ ವರ್ತಕರುಗಳ ಬಗ್ಗೆ ಅವರ ಸಂಘದ ಮೂಲಕ ಬಂದಿರುವ ಪ್ರಧಿಯನ್ನು ಇಲ್ಲಿ ಸಭೆಗೆ ಓದುತ್ತೇನೆ. ಅದು ಈ ರೀತಿ ಇದೆ :—

"Extract from Memorandum dated 12-1-1973 submitted to the Hon'ble Chief Minister Sri Devaraj Urs by the President, The Mysore Silk Handloom Weavers' Association, Bangalore.

12. The Raw Silk has Sales Taxation in two stages namely, one at the Turnover stage with a maxium of Rs. 2,000 at Raw Silk dealers' level, and the second at 2% in the Throwing Stage. This is misused to a great extent. Because the Thrown silk which is sent out in disguise as Raw Silk, only to avoid Sales tax. The levy of sales tax at the Thrown silk level should be discontinued."

ಶ್ರೀ ಕೆ. ಎಂ. ನಾಗಣ್ಣ.—ಸ್ವಾಮೀ, ಇವರು ಹೇಳಿದ ಸಭೆಯಲ್ಲಿ ನಾನು ಕೂಡ ಇದ್ದೆ ಮತ್ತು ಹಾನ್ಯ ಮಂತ್ರಿಗಳೂ ಅಲ್ಲಿದ್ದರು ಮತ್ತು ಇದರಲ್ಲಿರುವ ಹಾಕಿರುವ ಹಣುಮಂತಪ್ಪ ಎನ್ನುವ ವರ್ತಕರೂ ಇದ್ದರು. ನಾನು ಮಾನ್ಯ ಮಂತ್ರಿಗಳಿಗೆ ಇವರೆಲ್ಲ ತೆರಿಗೆಗಳ್ಳರು ಇಂತಹವರಿಗೆ ತೆರಿಗೆ ವಿನಾಯಿತಿ ಕೊಡುವುದು ಸರಿಯಲ್ಲ ಎಂದು ಹೇಳಿದಾಗ ಅದಕ್ಕೆ ಮಂತ್ರಿಗಳು ಥ್ರೋನ್ ಸಿಲ್ಕ್ ವರ್ತಕರುಗಳಿಗೆ ತೆರಿಗೆ ಹಾಕಿರುವುದನ್ನು ತೆಗೆಯುವುದಿಲ್ಲ ಎಂದು ಅಲ್ಲೇ ಒಪ್ಪಿದ್ದರು. ಇಲ್ಲಿ ಬಂದು ಹುರಿ ಮಾಡುವ ಕಾರ್ಖಾನೆ ವರ್ತಕರುಗಳಿಗೆರ್ಾ ತೆರಿಗೆ ತೆಗೆಯುತ್ತಿದ್ದಾರೆ. ಇದರಲ್ಲಿ ಯಾವುದೋ ಒಬ್ಬರು ಸೊಸೈಟಿಯ ಪ್ರೆಸಿಡೆಂಟರು ಹಾಗೂ ಸೆಕ್ರೆಟರಿಗಳು ಎಂದು ರುಜು ಹಾಕಿದರೆ ಇದು ಎಲ್ಲ ಜನರ ಪ್ರತಿನಿಧಿಗಳಾಗಿ ಕಳುಹಿಸಿರುವುದಲ್ಲ. ಇದು ವೀವರುಗಳಿಂದ ಬಂದ ಮನವಿ ಎಂದು ನಾವು ತಿಳಿಯುವುದಕ್ಕಾಗುವುದಿಲ್ಲ.

ಉಪಾಧ್ಯ ರು.—ಇದರ ಮೇಲೆ ಇನ್ನು ಹೇಳುವುದು ಸರಿಯಲ್ಲ.